ಆ) ಅಫ್‌ಜಲ್‌ಪುರದಲ್ಲಿರುವ ಕೆರೆಗನಹಳ್ಳಿ ಎಂಬ ಗ್ರಾಮಕ್ಕೆ ಪ್ರತಿ ವರ್ಷ ಭೀಮ ಮತ್ತು ಅಮರ್ಜಾ ನದಿಯ ಪ್ರವಾಹ ಬಂದು ಇಡೀ ಗ್ರಾಮದ ಸುತ್ತಾ ಜಲಾವೃತ್ತ ಆಗುತ್ತಿದೆ. ಈ ಭಾಗದಲ್ಲಿ ಮುಳುಗಡೆ ಆಗುತ್ತಿರುವ ಎಲ್ಲಾ ಗ್ರಾಮಗಳನ್ನು ಸ್ಥಳಾಂತರ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುವ ಬಗ್ಗೆ

ಶ್ರೀ ಮಾಲೀಕಯ್ಯ ಗುತ್ತೇದಾರ್ (ಅಫ್ಜಲ್‌ಪುರ) :– ಮಾನ್ಯ ಅಧ್ಯಕ್ಷರೆ, ನನ್ನ ಮತ ಕ್ಷೇತ್ರವಾದ ಅಫ್ಜಲ್‌ಪುರದಲ್ಲಿರುವ ಕೆರೆಗನಹಳ್ಳಿ ಎಂಬ ಗ್ರಾಮಕ್ಕೆ ಪ್ರತಿ ವರ್ಷ ಭೀಮ ಮತ್ತು ಅಮರ್ಜಾ ನದಿಯ ಪ್ರವಾಹ ಬಂದು ಇಡೀ ಗ್ರಾಮದ ಸುತ್ತಾ ಜಲಾವೃತ್ತ ಆಗುತ್ತಿದೆ. ಈ ಭಾಗದಲ್ಲಿ ಮುಳುಗಡೆ ಆಗುತ್ತಿರುವ ಎಲ್ಲಾ ಗ್ರಾಮಗಳನ್ನು ಸ್ಥಳಾಂತರ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಮೊನ್ನೆ ದಿವಸ ಆದ ಪ್ರವಾಹದ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಯವರು ಜಿಲ್ಲಾಧಿಕಾರಿಯವರಿಗೆ ಆದೇಶ ಕೊಟ್ಟಿದ್ದರು. ಸ್ಥಳಾಂತರಕ್ಕೆ ಅಲ್ಲಿನ ರೈತರು ಈಗಾಗಲೇ ಭೂಮಿಯನ್ನು ದಾನ ಮಾಡಿದ್ದಾರೆ. ಹಿಂದೆ ಗ್ರಾಮೀಣಾಭಿವೃದ್ಧಿ ಇಲಾಖೆಯ ಮಂತ್ರಿಯಾಗಿದ್ದಂಥ ಶೋಭಾ ಕರಂದ್ಲಾಜೆರವರು ಅಲ್ಲಿಗೆ ಬಂದು ಭೂಮಿ ದಾನ ಮಾಡಿದಂಥ ರೈತರಿಗೆ ಸನ್ಮಾನ ಕೂಡ ಮಾಡಿದ್ದಾರೆ. ಆದರೆ, ಸ್ಥಳಾಂತರ ಪಡಿಸುವಂಥ ಪಟ್ಟಿಯಲ್ಲಿ ಆ ಗ್ರಾಮದ ಹೆಸರು ಇಲ್ಲ. ಕಳೆದ ಅಧಿವೇಶನದಲ್ಲಿ ಮತ್ತು ಮೊನ್ನೆ ದಿವಸ ಕೂಡ ಈ ವಿಚಾರವನ್ನು ಸನ್ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದೇನೆ. ಇದರ ಬಗ್ಗೆ ಪತ್ರ ಕೂಡ ಬರೆದಿದ್ದೇನೆ. ಆ ಗ್ರಾಮವನ್ನು ಸೇರ್ಪಡೆ ಮಾಡುವ ಬಗ್ಗೆ ಸರ್ಕಾರ ಸ್ಪಷ್ಟಪಡಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಈ ವಿಷಯದ ಬಗ್ಗೆ ಜಿಲ್ಲಾಧಿಕಾರಿಯವರಿಗೆ ಕೇಳಿದಾಗ, ಇದಕ್ಕೆ ಬೇಕಾದಂಥ ಹಣವನ್ನು ಸರ್ಕಾರ ಬಿಡುಗಡೆ ಮಾಡಿ ಆದೇಶ ಮಾಡಿದರೆ ನಾವು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಆದ್ದರಿಂದ, ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಸರ್ಕಾರದ ಕಡೆಯಿಂದ ಯಾರು ಉತ್ತರ ಕೊಡುತ್ತಾರೆಯೋ ಕೊಡಲಿ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಇಲಾಖೆ ಸಚಿವರು) :– ಸನ್ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ ಮಾನ್ಯ ಕಂದಾಯ ಮಂತ್ರಿಯವರಿಂದ ಉತ್ತರ ಕೊಡಿಸುತ್ತೇನೆ.

ಶ್ರೀ ಮಾಲೀಕಯ್ಯ ಗುತ್ತೇದಾರ್ :– ಯಾವಾಗ ಉತ್ತರ ಕೊಡಿಸುತ್ತೀರಿ?

ಶ್ರೀ ಜಗದೀಶ್ ಶೆಟ್ಟರ್ :– ಇವತ್ತು ಅಥವಾ ನಾಳೆ ದಿವಸ ಕೊಡಿಸುತ್ತೇವೆ.

ಶ್ರೀ ಮಾಲೀಕಯ್ಯ ಗುತ್ತೇದಾರ್ :– ಇದು ಗಂಭೀರವಾದಂಥ ಪ್ರಶ್ನೆಯಾಗಿದೆ. ಇದಕ್ಕೆ ಉತ್ತರ ಕೂಡ ಇಲ್ಲವೆಂದರೆ ಹೇಗೆ?

ಅಧ್ಯಕ್ಷರು :– ಉತ್ತರ ಕೊಡಿಸುತ್ತೇನೆ.

ಶ್ರೀ ಮಾಲೀಕಯ್ಯ ಗುತ್ತೇದಾರ್ :– ನಾಳೆ ಕೊಡಿಸುತ್ತೀರಾ?

ಅಧ್ಯಕ್ಷರು :– ನಾಳೆ ಕೊಡುವುದಕ್ಕೆ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ :– ಆಯಿತು.

ಇ) ಹೊರ ಸಂಪನ್ಮೂಲ ಗುತ್ತಿಗೆ ಆಧಾರದ ಮೇಲೆ ಮೊರಾರ್ಜಿದೇಸಾಯಿ ವಸತಿ ಶಾಲೆಗಳಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿರುವವರನ್ನು ಖಾಯಂಗೊಳಿಸುವ ಬಗ್ಗೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ (ಅರಸೀಕೆರೆ) :– ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿರುವ ಮೊರಾರ್ಜಿದೇಸಾಯಿ ವಸತಿ ಶಾಲೆಗಳ ಶಿಕ್ಷಕರು ಸುಮಾರು 10 ವರ್ಷಗಳಿಂದ ಹೊರಸಂಪನ್ಮೂಲ ಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಅವರು ಈಗಾಗಲೇ ಬನ್ನಪ್ಪ ಪಾರ್ಕ್‌ನಲ್ಲಿ ಒಂದು ವಾರದಿಂದ ಉಪವಾಸ ಮುಷ್ಕರವನ್ನು ಮಾಡುತ್ತಿದ್ದಾರೆ. ಬಹುಶಃ 10 ವರ್ಷಗಳ ಕಾಲದಿಂದ ಸೇವೆಯನ್ನು ಮಾಡಿಕೊಂಡು ಬಂದಿರುವಂಥ ವ್ಯಕ್ತಿಗಳನ್ನು ಇವತ್ತಿನ ದಿವಸ ಖಾಯಂಗೊಳಿಸುವುದರಲ್ಲಿ ಸರ್ಕಾರ ಯಾವ ನಿರ್ಧಾರ ತೆಗೆದುಕೊಂಡಿದೆ ಎಂಬುದು ಒಂದು ಕಡೆಯಾದರೆ, ಹೊರಸಂಪನ್ಮೂಲದಿಂದ ಕೆಲಸ ಮಾಡುತ್ತಿರುವ ವ್ಯಕ್ತಿಗಳನ್ನು ಸಹ ತೆಗೆಯುತ್ತೇವೆಂದು ಹಾಸನದ ಪತ್ರಿಕೆಯಲ್ಲಿ ಒಂದು ಜಾಹೀರಾತು ಪ್ರಕಟಣೆ ಮಾಡಿದ್ದಾರೆ. ಮತ್ತೆ ಇದಕ್ಕಾಗಿ ಯಾರು ಬೇಕಾದರು ಮತ್ತೆ ಹೊಸದಾಗಿ ಅರ್ಜಿ ಸಲ್ಲಿಸಿ ಹೊರಸಂಪನ್ಮೂಲ ಗುತ್ತಿಗೆ ಆಧಾರದ ಮೇಲೆ ಸೇವೆಗೆ ನೀವುಗಳು ಬಂದು ಸೇರಿಕೊಳ್ಳಬಹುದಾಗಿದೆ. ಆದ್ದರಿಂದ, ಇದಕ್ಕೆ ಅರ್ಜಿಯನ್ನು ಸಲ್ಲಿಸಿ ಎಂದು ಹೇಳಿದ್ದಾರೆ. ಮತ್ತೆ ಇದಕ್ಕೆ ಜೇಷ್ಠತೆ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳುತ್ತೇವೆಂದು ಕೂಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಈಗಾಗಲೇ ಅಲ್ಲಿ ಕೆಲಸ ಮಾಡುವವರಿಗೆ 50 ವರ್ಷಗಳಷ್ಟು ವಯಸ್ಸಾಗಿದೆ. ಅವರುಗಳೆಲ್ಲರನ್ನು ಈಗ ಹೊರಸಂಪನ್ಮೂಲ ಗುತ್ತಿಗೆ ಆಧಾರ ಮೇಲಿನ ಸೇವೆಯಿಂದ ಹೊರಕ್ಕೆ ಹಾಕುತ್ತೇವೆಂದು ಹೇಳಿದರೆ ಅವರ ಜೀವನದ ಪರಿಸ್ಥಿತಿ ಏನಾಗಬೇಕು? ಇವರು ಬಹಳ ಗಂಭೀರವಾದಂಥ ಪ್ರಶ್ನೆಯಾಗಿದೆ. ಆದ್ದರಿಂದ, ಇದರ ಬಗ್ಗೆ ಸರ್ಕಾರ ಒಂದು ಸೂಕ್ತವಾದ ನಿರ್ಧಾರವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈಗಾಗಲೇ ಅವರೆಲ್ಲಾ 10 ವರ್ಷಗಳಷ್ಟು ಸೇವೆ ಮಾಡಿದ್ದಾರೆ. ಮತ್ತೆ ಅಲ್ಲಿನ ವಿದ್ಯಾರ್ಥಿಗಳಿಗೆ ಉತ್ತಮ ಮಟ್ಟದ ವಿದ್ಯಾಭ್ಯಾಸ ಕೊಡುತ್ತಿರುವ ನಿಟ್ಟಿನಲ್ಲಿ ಅವರು ಕಾರ್ಯೋನ್ಮುಖರಾಗಿದ್ದಾರೆ. ಇವರನ್ನು ತೆಗೆದು ಅವರ ಜಾಗಕ್ಕೆ ಪುನಃ ಹೊಸಬರನ್ನು ತೆಗೆದುಕೊಂಡು ಅವರಿಗೆ ತರಬೇತಿಯನ್ನು ಕೊಡುವ ಹೊತ್ತಿಗೆ ಎಷ್ಟು ವರ್ಷಗಳು ಆಗಬಹುದು ಹೇಳಿ? ಅಷ್ಟು ಹೊತ್ತಿಗೆ ಈ ವಸತಿ ಶಾಲೆಗಳ ಗತಿ ಮತ್ತು ಸಾಮರ್ಥ್ಯ ಏನಾಗಬಹುದೆಂಬ ವಿಚಾರದ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು.